ತಾರೀಖು 27ನೇ ಫಿಬ್ರವರಿ 1895.

ನಂ. 13193.—ಜಿ. ಎಫ್. 53—92.—ಸಬ್ ಅಸಿಸ್ಟೆಂಟ್ ಸರ್ಜಿಯರ್ ಮೆಸ್ಟರ್ ಟಿ. ವಿ. ಕುಪ್ಪುಸಾಮಿ ಮುದಲಿಯಾರ್, ಎಲ್. ಎಂ. ಎಸ್. ಯವರು, ಶಿವಮೊಗ್ಗ ಸಿವಿಲ್ ಹಾಸ್ಪಿಟಲ್‌ನಿಂದ ಸಕಲೇಶಪುರದ ಲೋಕಲ್ ಫಂಡ್ ಡಿಸ್ಪೆನ್ಸರಿಗೆ ವರ್ಗ ಮಾಡಲ್ಪಟ್ಟಿರುತ್ತಾರೆ.

ತಾರೀಖು 28ನೇ ಫಿಬ್ರವರಿ 1895.

ನಂ. 13275.—ಜಿ. 3039.—ಮೈಸೂರ್ ಸರ್ವಿಸ್ ರೆಗ್ಯುಲೇಷ್ಗಳ 188ನೇ ಆರ್ಟಿಕಲ್ ಅನುಸರಿಸಿ, ಮದ್ದಗಿರಿ ತಾಲ್ಲೂಕು ಅಮಲ್ದಾರ್ ಕೆ. ಶ್ರೀಕಂಠಯ್ಯನವರು, 1895ನೇ ಇಸವಿ ಮಾರ್ಚ್ 2ನೇ ತಾರೀಖು ವೊದಲು ಅಥವಾ ಅವರದನ್ನುಪಯೋಗಿಸಿಕೊಳ್ಳ ಬಹುದಾವ ತಾರೀಖು ವೊದಲು ಇಪ್ಪತ್ತು ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತಾರೆ.

2. ಮದ್ದಗಿರಿ ತಾಲ್ಲೂಕು ಕೊರ್ಟಗೆರೆ ಸಬ್ ಡಿವಿಜ್ ಡೆಪ್ಯುಟಿ ಅಮಲ್ದಾರರು, ಆಮಲ್ದಾರ್ ಶ್ರೀಕಂಠಯ್ಯನವರು ರಜಾ ಮೇಲಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಪೂರಾ ತಾಲ್ಲೂಕು ಇ೯ಚಾರ್ಜಿನಲ್ಲಿರತಕ್ಕದ್ದು.

ತಾರೀಖು 1ನೇ ಮಾರ್ಚ್ 1895.

ನಂ. 13220.—ಜಿ. 3032.—ಮೈಸೂರ್ ಸರ್ವಿಸ್ ರೆಗ್ಯುಲೇಷ್ಗಳ 172ನೇ ಆರ್ಟಿಕಲ್ ಅನುಸರಿಸಿ, ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ ವೈಸ್ ಪ್ರೆಸಿಡೆಂಟರಾದ ಮೆಸ್ಟರ್ ಕೆ. ಶ್ರೀನಿವಾಸರಾಯರವರು, 95ನೇ ಇಸವಿ ಮಾರ್ಚ್ 4ನೇ ತಾರೀಖು ವೊದಲು 13 ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಾರೆ.

ತಾರೀಖು 2ನೇ ಮಾರ್ಚ್ 1895.

ನಂ. 13499.—ಜಿ. ಎಫ್. 464.—3ನೇ ಗ್ರೇಡ್ ಅಸಿಸ್ಟೆಂಟ್ ಸರ್ಜಿಯರ್ ಮೆಸ್ಟರ್ ಇ. ಎಸ್. ಕೃಷ್ಣಸಾಮಿ ಅಯ್ಯರ್, ಎಂ. ಬಿ. ಮತ್ತು ಸಿ. ಎಂ. ಯವರು, ಸದರೀ ಗ್ರೇಡ್‌ನಲ್ಲಿ ಅಯಿದು ವರ್ಷಗಳ ನೌಕರಿಯಂ ಪೂರ್ತಿ ಮಾಡಿರುತ್ತಾರೆಯಾಗಿ 1894ನೇ ಇಸವಿ ಅಕ್ಟೋಬರ್ 29ನೇ ತಾರೀಖು ವೊದಲು 2ನೇ ಗ್ರೇಡಿಗೆ ಬಡ್ತೀ ಮಾಡಲ್ಪಟ್ಟಿರುತ್ತಾರೆ.

ಹುಕುಂ ಬವೋಜಿಬ್,

ಎಲ್. ಅನಂತಸಾಮಿರಾವ್,
ಫಾರ್ ಚೀಫ್ ಸೆಕ್ರಟರಿ.